"ಆತನಿಗೆ ಹೂದಾನಿಯಲ್ಲಿ ಆಸಕ್ತಿಯಿದೆ ಎನ್ನೋದು ಸ್ಪಷ್ಟ. ಅದಕ್ಕೆ ಹೆಚ್ಚು ದರ ಹೇಳಿದ್ದಾನೆ. ನೀವು ಅವನನ್ನೇ ಕೇಳಬಹುದಿತ್ತಲ್ಲ?"

"ಕೇಳ್ದೆ. ತನ್ನ ಹತ್ತಿರ ಅಂತಹದೇ ಹೂದಾನಿಯಿದ್ದು, ಇನ್ನೊಂದರ ತಲಾಶಿನಲ್ಲಿದ್ದೆ. ಹಾಗಾಗಿ ಹೆಚ್ಚು ದರ ಹೇಳ್ದೆ ಅಂದ."

"ಹಾಗಿದ್ರೆ ಆತನ ವ್ಯವಹಾರ ತರ್ಕಬದ್ಧವಾಗಿಯೇ ಇದೆಯಲ್ಲ. ವಿಚಿತ್ರ ಅಂತ ನನಗನ್ನಿಸೋಲ್ಲ."

"ನಾನು ನಿಮ್ಗೆ ಎಲ್ಲಾ ಮಾಹಿತಿ ನೀಡಬೇಕಷ್ಟೆ. ಅಷ್ನಿಗೆ ಪ್ರಾಚೀನ ವಸ್ತುಗಳ ಬಗ್ಗೆ ಏನೂ ಪರಿಣತಿ ಇದ್ದಂತೆ ಅನಿಸಲಿಲ್ಲ. ಅಸಲಿಗೆ, ಆತನಿಗೆ ಆಸಕ್ತಿಯೇ ಇದ್ದಂತಿರಲಿಲ್ಲ. ಆತ ಆಗಾಗ್ಗೆ ತನ್ನ ಚರವಾಣಿಯಲ್ಲಿ ಫೋಟೋಗಳನ್ನು ನೋಡ್ತಾ, ನನ್ನಲ್ಲಿದ್ದ ವಸ್ತುಗಳೊಂದಿಗೆ ತುಲನೆ ಮಾಡ್ತಾಯಿದ್ದ. ಆತನ ಮೊಬೈಲಲ್ಲಿ ಇದ್ದಿದ್ದೆಲ್ಲವೂ ಆತ ಖರೀದಿಸಲು ಬಯಸಿದ ವಸ್ತುಗಳ ಚಿತ್ರಗಳು! ಅವು ಅವನ ಬಳಿಗೆ ಹೇಗೆ ಬಂದವು? ಆ ಕಲಾಕೃತಿಗಳೇನೂ ಬಹಳ ಹೆಸರುವಾಸಿಯಾದ ಅಪರೂಪದ ವಸ್ತುಗಳೇನಲ್ಲ. ಹಾಗಿದ್ದರೂ ಆ ಚಿತ್ರಗಳು ಆತನಿಗೆ ಎಲ್ಲಿಂದ ಸಿಕ್ಕಿದವು? ಆ ಮೂರೂ ವಸ್ತುಗಳನ್ನು ನಾನು ಇತ್ತೀಚೆಗಷ್ಟೇ ಕೊಂಡಿದ್ದು, ಕೋಣೆಯಲ್ಲಿ ಮೂಲೆಯಲ್ಲಿ ಇರಿಸಿದ್ದೆ. ಅದರ ಪ್ಯಾಕೆಟ್ ಕೂಡಾ ಪೂರ್ತಿಯಾಗಿ ಬಿಚ್ಚಿರಲಿಲ್ಲ. ಆತ ಆ ವಸ್ತುಗಳನ್ನೇ ಉದ್ದೇಶಿಸಿ, ಯಾಕೆ ಬಂದ? ನನ್ನ ಎಣಿಕೆಯಂತೆ, ಆತ ಪ್ರಾಚೀನ ವಸ್ತು ಸಂಗ್ರಹಕ್ಕಾಗಿ ಬಂದವನಲ್ಲ. ಆತನ ಉದ್ದೇಶ ಏನಿರಬಹುದು?"

"ಕೇವಲ ಕಾಕತಾಳೀಯವೇ ಆಗಿರಬಹುದಲ್ಲ ಅಥವಾ ಆ ವಸ್ತುಗಳ ಹಿಂದಿನ ಮಾಲೀಕ ಆತನ ಮಿತ್ರನಾಗಿದ್ದು, ಚಿತ್ರಗಳು ಸಿಕ್ಕಿರಬಹುದಲ್ವೆ?"

"ಕೊಂಚ ತಡೀರಿ, ಸಾರ್. ಎರಡು ಮುಖ್ಯ ವಿಚಾರಗಳಿವೆ. ಅವ್ನು ಕೇಳಿದ ವಸ್ತುಗಳನ್ನು ಮಾರುವ ಬಗ್ಗೆ ಯೋಚಿಸಿ ಹೇಳ್ತೀನಿ, ನಿಮ್ಮ ನಂಬರ್ ಕೊಡಿ ಅಂದ್ರೆ ಆತ ಕೊಡಲೇ ಇಲ್ಲ. ತಾನೇ ಮತ್ತೆ ಬರುವುದಾಗಿ ಹೇಳ್ದ. ಅವ್ನು ಯಾಕೆ ತನ್ನ ಮೊಬೈಲ್ ಸಂಖ್ಯೆ ನೀಡಲಿಲ್ಲ? ಅವ್ನು ಹೋಗುತ್ತಿರುವಾಗಷ್ಟೇ ಆತನನ್ನು ಕಂಡ ನನ್ನ ಹೆಂಡ್ತಿ ಒಂದು ಬೆಚ್ಚಿ ಬೀಳೋ ಸಂಗ್ತಿ ಹೇಳಿದ್ಲು. ಹಿಂದಿನ ದಿನ ಮುಸ್ಸಂಜೆ ಹೊತ್ತಿಗೆ ಅವ್ನು ಕಳ್ಳನಂತೆ ಕಾಂಪೌಂಡ್ ಪ್ರವೇಶಿಸಿ, ಮಹಡಿಯೇರಿ, ಕಿಟಕಿಯಿಂದ ಒಳಗೆ ಇಣುಕುತ್ತಿದ್ದನಂತೆ. ಮಹಡಿಗೆ ಹೊರಗಿನಿಂದಲೂ ಮೆಟ್ಟಿಲುಗಳಿವೆ. ನನ್ ಹೆಂಡ್ತಿ ಯಾಕೋ ಆ ಕೋಣೆ ಪ್ರವೇಶಿಸಿದವ್ಳು ಆತನನ್ನು ಕಂಡಳು. ಆತ ಚೆಂಗನೆ ಇಳಿದು ಮಾಯವಾದನಂತೆ. "

"ಓಕೆ, ನಿಮ್ಮ ಗಿರಾಕಿ ತುಸು ಕುತೂಹಲ ಹುಟ್ಟಿಸುವಂತಿದ್ದಾನೆ. ನಿಮ್ಮ ಬಳಿ ಕಾವೇರಿ ಎಂಪೋರಿಯಂನಿಂದ ಖರೀದಿ ಮಾಡ್ದ ಬಿಲ್ಲು ಇದೆಯೆ?"

ತಂಗರಾಜು ಬಿಲ್ ಕೊಟ್ಟ.

"ಇದು ನಗದು ಬಿಲ್, ಸಾರ್. ಇದರಲ್ಲಿ ನನ್ನ ಹೆಸರೇ ಇಲ್ಲ. ಕಾವೇರಿ ಎಂಪೋರಿಯಂನವ್ರು ನನ್ನ ಬಗ್ಗೆ ಹೇಳಲು ಸಾಧ್ಯವೇ ಇಲ್ಲ."

ತಂಗರಾಜು ತನ್ನ ಊಹನೆ ಮಂಡಿಸಿದ. ಕರಮಚಂದ ಬಿಲ್ ಮೇಲೆ ಕಣ್ಣು ಹಾಯಿಸಿ, ನನ್ನತ್ತ ಚಾಚಿದ. ತಂಗರಾಜು ಒಟ್ಟು ಐದು ವಸ್ತುಗಳನ್ನು ಖರೀದಿಸಿದ್ದ, ಮೊತ್ತ ಎಪ್ಪತ್ತೈದು ಸಾವಿರವಾಗಿತ್ತು. ಮೇಲೆ ಆತನ ಹೆಸರು ಮಾತ್ರ ಇತ್ತು. ಅದರ ಹೊರತಾಗಿ, ಬೇರೇನೂ ಇರಲಿಲ್ಲ. ಅದನ್ನು ನೋಡಿಕೊಂಡು, ತಂಗರಾಜುವಿನ ವಿಳಾಸ ಹೇಳುವುದು ಕಷ್ಟ ಅಂತ ನನಗೂ ಅನ್ನಿಸಿತು.

"ತಂಗರಾಜು, ಕಾವೇರಿ ಎಂಪೋರಿಯಂನಲ್ಲಿ ಖರೀದಿ ಮಾಡಿದಾಗ, ಡೆಲಿವರಿ ಚಲನ್ ಅಂತ